'ಕಲಾ ವಿಭಾಗ ಪ್ರಾಧ್ಯಾಪಕರು ತ್ಮಕವಾಗಿ ಪ್ರಶ್ನಿಸುತ್ತೇವೆ' ಎಂದರು.

# 'ಮಾಧ್ಯಮಗಳಲ್ಲಿ ಲಿಂಗ ಸಮಾನತೆ ಇಲ್ಲ'

ಬೆಂಗಳೂರು: 'ಮಾಧ್ಯಮಗಳಲ್ಲಿ ಇಂದಿಗೂ ಲಿಂಗ ಸಮಾನತೆ ಬಂದಿಲ್ಲ' ಎಂದು ಪತ್ರಕರ್ತೆ ಅಮ್ಮು ಜೋಸೆಫ್ ಹೇಳಿದರು.

ಬಜೆಟ್ ಮತ್ತು ನೀತಿ ಅಧ್ಯಯನ ಕೇಂದ್ರವು ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಮಾಧ್ಯಮ ಮತ್ತು ಲಿಂಗ' ಕುರಿತು ಅವರು ಉಪನ್ಯಾಸ ನೀಡಿದರು.

'ದೇಶದಲ್ಲಿ 832 ಖಾಸಗಿ ವಾಹಿನಿಗಳಿವೆ. ಅದರಲ್ಲಿ ಅರ್ಧದಷ್ಟು ಸುದ್ದಿ ವಾಹಿನಿಗಳಿವೆ. ಆದರೆ, ಅವುಗಳಲ್ಲಿ ಮಹಿಳೆ ಪ್ರಮುಖ ಹುದ್ದೆಗಳಲ್ಲಿ ಇಲ್ಲ. ಬಹುತೇಕ ಮಾಧ್ಯಮಗಳು ರಾಜಕಾರಣಿಗಳು, ಕಾರ್ಪೊರೇಟ್ ವ್ಯಕ್ತಿಗಳ ಹಿಡಿತದಲ್ಲಿವೆ. ಹೀಗಾಗಿ ಮಾಧ್ಯಮಗಳಲ್ಲಿ ಮಹಿಳೆಗೆ ಉನ್ನತ ಸ್ಥಾನ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟರು.

'ಲಿಂಗ ತಾರತಮ್ಯ ಮರೆಯಾಗಬೇಕು. ಪುರುಷರಿಗೆ ಸಿಗುವಷ್ಟೇ ಮಾನ್ಯತೆ ಮಹಿಳೆಯರಿಗೂ ಸಿಗುವಂತಹ ವಾತಾವರಣ ನಿರ್ಮಾಣ ಆಗಬೇಕು' ಎಂದರು.